ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ 18ನೇ ಅಡ್ಡ ರಸ್ತೆ ಮಲ್ಲೇಶ್ವರಂ, ಬೆಂಗಳೂರು-12

ಸಂಖ್ಯೆ: ಪಪೂಶಿಇ/ಸರಬರಾಜು/ ಉಪರೂಟ್/ಮಾ-2018 ದಿನಾಂಕ: 02-02-2018

ಮೆ ________________

________________

________________

ಮಾನ್ಯರ

ವಿಷಯ: 2018 ರ ದ್ವಿತೀಯ ಪಿ.ಯು.ಸಿ ಪರೀಕ್ಷೆಯ ಬೆಂಗಳೂರು ನಗರದ ಪರೀಕ್ಷಾ ಕೇಂದ್ರಗಳಿಗೆ ಉತ್ತರ ಪತ್ರಿಕೆ, ಹೆಚ್ಚುವರಿ ಹಾಳೆ ಹಾಗೂ ಸ್ಟೇಷನರಿ ಬಂಡಲಗಳನ್ನು ಸಾಗಿಸಲು ಸರಕು ಸಾಗಾಣೆ ವಾಹನ ಸರಬರಾಜಿಗೆ ದರಪಟ್ಟಿ ಆಹ್ವಾನ.

*****

ಈ ಕೆಳಗೆ ನಮೂದಿಸಿರುವ ಸರಕುಗಳ ಸಾಗಾಣೆ ಕಾರ್ಯಕ್ಕಾಗಿ ಸರಕು ಸಾಗಾಣೆ ವಾಹನ(407 ಟೆಂಪೋ) ಬಾಡಿಗೆಗೆ ಸ್ಪರ್ಧಾತ್ಮಕ ದರದಲ್ಲಿ ಸರಬರಾಜು ಮಾಡಲು ದರಪಟ್ಟಿಯನ್ನು ಆಹ್ವಾನಿಸಲಾಗಿದೆ.

1. <u>ಸರಕುಗಳ ವಿವರ:</u>

ಅ) ಉತ್ತರ ಪತ್ರಿಕೆ ಬಂಡಲುಗಳು.

ಆ) ಹೆಚ್ಚುವರಿ ಹಾಳೆ ಬಂಡಲುಗಳು.

ಇ) ಸ್ಟೇಷನರಿ ಬಂಡಲುಗಳು.

2. <u>ಸಾಗಣೆ ಮಾಡಿಕೊಡಬೇಕಾದ ಅವದಿ</u>

ದಿನಾಂಕ:14-02-2018 ರಿಂದ ದಿನಾಂಕ:19-02-2018 ಒಳಗೆ (ಭಾನುವಾರ ಹೊರತುಪಡಿಸಿ)

3. <u>ಸಾಗಣೆ ಮಾಡಬೇಕಾದ ಹಾಗೂ ಬಟವಾಡೆ ಮಾಡಬೇಕಾದ ಸ್ಥಳಗಳ ವಿವರ:</u>

ಇಲಾಖೆಯ ಬೊಮ್ಮನಹಳ್ಳಿಯ ಗೋದಾಮಿನಿಂದ ಬೆಂಗಳೂರು ಉತ್ತರ ಜಿಲ್ಲೆಯ ದ್ವಿತೀಯ ಪಿಯುಸಿ ಪರೀಕ್ಷಾ ಕೇಂದ್ರಗಳಿಗೆ ಮತ್ತು ಬೆಂಗಳೂರು ದಕ್ಷಿಣ ಜಿಲ್ಲೆಯ ದ್ವಿತೀಯ ಪಿಯುಸಿ ಪರೀಕ್ಷಾ ಕೇಂದ್ರಗಳಿಗೆ ವಿತರಣೆ ಮಾಡಲು ಸರಕುಗಳ ಸಾಗಾಣೆ ಟೆಂಪೋಗಳಲ್ಲಿ ಸಾಗಿಸಬೇಕಾಗಿದೆ. ಸ್ಥಳಗಳ ಪೂರ್ಣ ಮಾಹಿತಿಯನ್ನು ಇಲಾಖೆಯಿಂದ ಪಡೆದುಕೊಳ್ಳಬಹುದು.

4. <u>ದರವನ್ನು ಇದರೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ ಸಲ್ಲಿಸಬೇಕು.</u>

ಅ) ದರವನ್ನು ಎಲ್ಲಾ ಪರೀಕ್ಷಾ ಕೇಂದ್ರಗಳಿಗೆ 16 ರಿಂದ 18 ಟೆಂಪೋಗಳಲ್ಲಿ ಸಾಗಾಣೆ ಮಾಡಿಕೊಡಲು ಒಂದು ಟೆಂಪೋಗೆ ದರ ನಮೂದಿಸಬೇಕು.

ಆ) ನಿಗದಿತ ಅವದಿಯೊಳಗೆ ಎಲ್ಲಾ ಪರೀಕ್ಷಾ ಕೇಂದ್ರಗಳಿಗೆ ಸಾಗಾಣೆ ಕಾರ್ಯ ಪೂರ್ಣಗೊಳ್ಳಬೇಕು.

ಇ) ಪ್ರತಿದಿನ ಬೆಳಿಗ್ಗೆ 9.00 ರಿಂದ ಸಂಜೆ 4.00 ಗಂಟೆವರೆವಿಗೆ ಸಾಗಾಣೆ ಮಾಡಿಕೊಡಬೇಕು.

ಈ) ಸೂಚಿಸಿರುವ ದರವು ಎಲ್ಲಾ ತೆರಿಗೆಗಳು ಸೇರಿದ ದರವಾಗಿರುತ್ತದೆ. ನಿಯಮಾನುಸಾರ ತೆರಿಗೆಗಳನ್ನು ಬಿಲ್ಲಿನಲ್ಲಿ ಮುರಿದುಕೊಳ್ಳಲಾಗುವುದು.

ಉ) ದಿನಾಂಕ:14-02-2018 ರಿಂದ ದಿನಾಂಕ:19-02-2018 ಒಳಗೆ (ಭಾನುವಾರ ಹೊರತುಪಡಿಸಿ)

( ಪುಟ 2 ಕ್ಕೆ )

ಒಟ್ಟು 16 ರಿಂದ 18 ಟೆಂಪೋಗಳಲ್ಲಿ ಎಲ್ಲಾ ಪರೀಕ್ಷಾ ಕೇಂದ್ರಗಳಿಗೆ ಸಾಗಾಣೆ ಮಾಡಿಕೊಡುವ ಒಂದು ಟೆಂಪೋಗೆ ದರಪಟಿಯಲ್ಲಿ ನಮೂದಿಸಬೇಕು. ಅದ್ದರಿಂದ ಈ ಕಾರ್ಯಕ್ಕೆ ಇಲಾಖೆ ತಿಳಿಸುವ ಪ್ರತಿದಿನ ಅಗತ್ಯವಿರುವಷ್ಟು ಟೆಂಪೋಗಳನ್ನು ಬಾಡಿಗೆಗೆ ಒದಗಿಸಲು ಸಾಮರ್ಥ್ಯವುಳ್ಳ ಟ್ರಾನ್ಸ್‌ಪೋರ್ಟ್‌ದಾರರು ದರಪಟ್ಟಿ ಸಲ್ಲಿಸಬೇಕು. ಸಾಮರ್ಥ್ಯವಿಲ್ಲದ್ದು ಕಂಡುಬಂದಲ್ಲಿ ಅಂಥಹವರನ್ನು ದರಪಟ್ಟಿಯಲ್ಲಿ ಪರಿಗಣಿಸಲಾಗುವುದಿಲ್ಲ.

ಋ) ಪೂರ್ಣ ಸರಕುಸಾಗಣೆ ಕಾರ್ಯ ತೃಪ್ತಿಕರವಾಗಿ ಮಾಡಿಕೊಟ್ಟ ನಂತರ ಬಿಲ್ಲನ್ನು ಪಾವತಿಗೆ ಸಲ್ಲಿಸಬೇಕು.

ೠ) ಕಡಿಮೆ ದರ ಸೂಚಿಸಿರುವ ದರಪಟ್ಟಿಯನ್ನು ಪರಿಗಣಿಸಲಾಗುವುದು. (ಮೇಲಿನ ನಿಯಮಗಳಿಗೆ ಹೊಂದಿಕೊಂಡಿದ್ದಲ್ಲಿ ಮಾತ್ರ)

ಎ) ಒಪ್ಪಿಗೆಯಾದ ದರವನ್ನು ಹೆಚ್ಚು ಮಾಡಲು ಬರುವುದಿಲ್ಲ.

3. <u>ಸದರಿ ದರಪಟ್ಟಿಯು ಮಾರ್ಚ್ 2018 ರ ಪರೀಕ್ಷೆಗೆ ಮಾತ್ರ ಅನ್ವಯಿಸುತ್ತದೆ.</u>

ಅ) ದರಪಟ್ಟಿಯನ್ನು ದಿನಾಂಕ: 12-02-2018 ರ ಮಧ್ಯಾಹ್ನ 3.00 ಗಂಟೆಯೊಳಗೆ ಸಲ್ಲಿಸಬೇಕು. ಅಂದೇ ಮಧ್ಯಾಹ್ನ 4.00 ಗಂಟೆಗೆ ಹಾಜರಿರುವ ದರಪಟ್ಟಿದಾರರ ಸಮ್ಮುಖದಲ್ಲಿ ತೆರೆಯಲಾಗುವುದು.

ಆ) ದರಪಟ್ಟಿಯನ್ನು ಒಪ್ಪುವ ತಿರಸ್ಕರಿಸುವ ಹಕ್ಕು ನಿರ್ದೇಶಕರಿಗಿರುತ್ತದೆ.

ಇ) ದರಪಟ್ಟಿಯನ್ನು ಸೀಲ್ ಮಾಡಿದ ಲಕೋಟೆ ಮೇಲೆ "ಸರಕು ಸಾಗಣೆ ಟೆಂಪೋ ಸರಬರಾಜುವಿಗೆ ದರಪಟ್ಟಿ ಸಲ್ಲಿಕೆ" ಎಂದು ನಮೂದಿಸಿ ಸಲ್ಲಿಸಬೇಕು.

ಈ) ಟೆಂಪೋವಿನ ನೋಂದಣಿ, ಪ್ರಮಾಣ ಪತ್ರ, ಉತ್ತಮ ಸ್ಥಿತಿಯಲ್ಲಿರುವ ಮತ್ತು ಎಮಿಷನ್‌ಟೆಸ್ಟ್‌ನ ಪ್ರಮಾಣ ಪತ್ರಗಳಿರಬೇಕು. ಡ್ರೈವರ್ ಲೈಸೆನ್ಸ್ ಹೊಂದಿರಬೇಕು. ವಿಮೆ ಮಾಹಿತಿ ಇರಬೇಕು.

ಉ) ಈ ಕಾರ್ಯದಲ್ಲಿ ಯಾವುದೆ ರೀತಿಯ ಅಪಘಾತಗಳು ಅಥವಾ ಇನ್ನಿತರೆ ಅವಘಡಗಳಿಗೆ ಟ್ರಾನ್ಸ್‌ಪೋರ್ಟ್‌ದಾರರೆ ಪೂರ್ಣ ಜವಾಬ್ದಾರಿಯಾಗಿರುತ್ತಾರೆ.

ಊ) ಉಳಿದ ನಿಯಮಗಳು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ನಿಯಮದಂತೆ ಇರುತ್ತದೆ.

ತಮ್ಮ ದರಪಟ್ಟಿಯನ್ನು ಸಲ್ಲಿಸಲು ಈ ಮೇಲಿನ ಮಾಹಿತಿಯೊಂದಿಗೆ ಕೋರಲಾಗಿದೆ.

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

ದರಪಟ್ಟಿಯನ್ನು ಸಲ್ಲಿಸುವ ನಮೂನೆ :

| ಕ್ರ.ಸಂ | ವಿವರ | ಧರ (ರೂಗಳಲ್ಲಿ) |
|---|---|---|
| 0 | (1.5 ಟನ್ ಸಾಮರ್ಥ್ಯವಿರುವ ವಾಹನ ಬೆಂಗಳೂರು ನಗರದ ಬಳಕೆಗೆ ) | (ಒಂದು ವಾಹನಕ್ಕೆ ಒಂದು ದಿನಕ್ಕೆ ಎಲ್ಲಾ ತೆರಿಗೆ ಸೇರಿ ನಮೂದಿಸುವುದು) |
| | | |
| | | |